# ಹರೀಕೀರ್ತನಾ ವಿದುಷಿಯ ನೆನಪು

- ವಿಜಯಲಕ್ಷ್ಮಿ ನಂದಳಿಕೆ



ಹರಿಕೀರ್ತನಾ ವಿದುಷಿಯವರ ಬಾಲ್ಯದ ಛಾಯಾಚಿತ್ರ

ಹರಿಕೀರ್ತನೆ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದ್ದ ಪದ್ಮಾವತಿ ಶಿವರಾಮರಾವ್ ಅವರು ತಮ್ಮ ಸುಮಧುರ ಕಂಠದ ಹರಿಕಥಾಮೃತಸಾರದ ಗುಂಗನ್ನು ಉಳಿಸಿಹೋಗಿದ್ದಾರೆ.

''ನಾನು ಹಾಗೂ ನನ್ನ ಮಿತ್ರರು ಸ್ವಾತಂತ್ರ್ಯ ಪೂರ್ವದಲ್ಲಿ 'ಬಾಲಭಾರತಿ' ಪದ್ಮಾವತಿ ಬಾಯಿಯ ಹರಿಕಥೆ ಇದೆ ಎಂದು ತಿಳಿದ ಕೂಡಲೇ ಎಲ್ಲಿಂದ ಎಲ್ಲಿಗೆ ಎಷ್ಟು ದೂರವಿದ್ದರೂ ಕಾಲ್ನಡಿಗೆಯಲ್ಲೇ ನಡೆದುಕೊಂಡು ಹೋಗಿ ನಾಲ್ಕು ಆಣೆಯ ಟಿಕೆಟ್ ಖರೀದಿಸಿ ಹರಿಕಥೆ ಕೇಳುತ್ತಿದ್ದೆವು. ಪದ್ಮಾವತಿ ಬಾಯಿಯ 'ಸೀತಾ ಕಲ್ಯಾಣ' 'ಭಕ್ತ ಕುಚೇಲನ ಕಥೆ' ಮುಂತಾದ ಪ್ರಸಂಗಗಳು ಅಪೂರ್ವ. ಅವುಗಳನ್ನು ಮತ್ತೆ ಮತ್ತೆ ಕೇಳಬೇಕೆನಿಸುತ್ತಿತ್ತು''.

ಈ ಮಾತನ್ನು ಹೇಳಿದವರು ನಂದಳಿಕೆ ಸುಬ್ಬರಾವ್ ಎಂಬ 80 ವರ್ಷದ ಹಿರಿಯರು. ಆಗಿನ ಕಾಲದಲ್ಲಿ ಹರಿಕಥೆಗೆ ಭಾರೀ ಹೆಸರು ಮಾಡಿದ್ದ ಪದ್ಮಾವತಿ ಬಾಯಿ ಅವರ ಬಗ್ಗೆ ಅಭಿಮಾನದಿಂದ ಹೀಗೆ ಮಾತಾಡುವ ಅನೇಕ ಹಿರಿಯರು ಸಿಗುತ್ತಾರೆ.

ಹೌದು, ತನ್ನ ಒಂಬತ್ತನೇ ವಯಸ್ಸಿನಲ್ಲಿ ಹರಿಕೀರ್ತನೆಯ ಕ್ಷೇತ್ರಕ್ಕೆ ಕಾಲಿಟ್ಟದ್ದ ಪದ್ಮಾವತಿಬಾಯಿ ಕೇವಲ ಐದೇ ವರ್ಷದಲ್ಲಿ ದಕ್ಷಿಣ ಕನ್ನಡ, ಮುಂಬಯಿ, ಮೈಸೂರು, ಮದ್ರಾಸ್, ಕೊಯಮುತ್ತೂರು ಮುಂತಾದ ಹಲವಾರು ಕಡೆ ಪ್ರಖ್ಯಾತಿ ಹೊಂದಿ ಸುವರ್ಣ ಪದಕಗಳನ್ನು ಹಾಗೂ ಸಂಗೀತ, ಕಲೆ, ವಾಕ್ ಪಟುತ್ವ ಅಭಿನಯಗಳಿಗೆ ಯೋಗ್ಯತಾ ಪತ್ರಗಳನ್ನು ಮಾತ್ರವಲ್ಲದೇ 'ಬಾಲಭಾರತಿ' ಎಂಬ ಬಿರುದನ್ನೂ ಪಡೆದವರು. ಅದು ಸರಿ ಸುಮಾರು 1932ರ ಕಾಲ. ಪುತ್ತೂರಿನ ತಾಳಿಪಾಡಿ ಸೀತಾರಾಮಯ್ಯ ಹಾಗೂ ಗೋಪಿಯಮ್ಮ ದಂಪತಿಗಳ ಪುತ್ರಿಯಾದ ಪದ್ಮಾವತಿ ಬೋಳುವಾರು ಪ್ರಾಥಮಿಕ ಶಾಲೆಯಲ್ಲಿ ನಾಲ್ಕನೇ ತರಗತಿಯಲ್ಲಿ ಕಲಿಯುತ್ತಿದ್ದಾಗಿನ ಮಾತು. ಶಾಲಾ ವಾರ್ಷಿಕೋತ್ಸವದಂದು ಎಲ್ಲಾ ವಿದ್ಯಾರ್ಥಿಗಳಂತೆ ಗುರುಗಳೊಬ್ಬರ ಪ್ರೋತ್ಸಾಹದಿಂದಲೇ ಬಾಲಕಿ ಪದ್ಮಾವತಿ ಹರಿಕೀರ್ತನ ಕಾರ್ಯಕ್ರಮ ನೀಡಿದ್ದರು. ಬಾಲಕಿಯ ಕಂಠ ಸಿರಿಯಿಂದ ಹೊರ ಹೊಮ್ಮಿದ 'ವಾಲ್ಮೀಕಿ ಚರಿತ್ರೆ'ಗೆ ಮಾರು ಹೋದ ತಂದೆಯ ಸ್ನೇಹಿತರು 'ಬಾಲಕಿಗೆ ಹರಿಕಥಾ ವಿದುಷಿಯಾಗುವ ಭವಿಷ್ಯವಿದೆ. ಆಕೆಗೆ ಇನ್ನೂ ಹೆಚ್ಚಿನ ಅಭ್ಯಾಸ ನೀಡಬೇಕು' ಎಂದು ಹುರಿದುಂಬಿಸಿದರು. ತಂದೆ ತಾಳಿಪ್ಪಾಡಿ ಸೀತಾರಾಮಯ್ಯ ಹರಿಕಥಾ ಕಲಾವಿದರಾಗಿದ್ದರಷ್ಟೇ ಅಲ್ಲದೆ ಆರೇಳು ವರ್ಷ ನಾಟಕದ ಕಂಪೆನಿಯೊಂದರಲ್ಲಿದ್ದವರು. ಪಿಟೀಲು, ತಬಲಾ, ಕೊಳಲುವಾದಕರೂ ಆಗಿದ್ದ ಸೀತರಾಮಯ್ಯ ಅವರು ಮಗಳಿಗೆ ಕತೆ ಬರೆದುಕೊಟ್ಟು ಪ್ರೋತ್ಸಾಹಿಸಿದರು.

ಆರಂಭದಲ್ಲಿ ಎರಡು ತಾಸುಗಳ ಕಾಲ ನಿರರ್ಗಳವಾಗಿ ಸಂಗೀತ ಹಾಗೂ ಅಭಿನಯದೊಂದಿಗೆ ಹರಿಕಥಾ ಪ್ರಸಂಗಗಳನ್ನು ಆಡಿ ತೋರಿಸಿದ ಪದ್ಮಾವತಿ ಅನುಭವ ಪರಿ ಪಕ್ವವಾಗುತ್ತಲೇ ಮೂರು ಘಂಟೆಯವರೆಗೂ ಮುಂದುವರೆಸಿದರು. 'ಸುಗ್ರೀವಸಖ್ಯ', 'ದ್ರೌಪದಿ ವಸ್ತ್ರಾಪಹರಣ', 'ಸತೀ ಕಲ್ಯಾಣ', 'ಶ್ರೀ ಕೃಷ್ಣ ಜನ್ಮ', 'ಉತ್ತರ ಗೋಗ್ರಹಣ', 'ಧ್ರುವ ಚರಿತ್ರೆ', 'ರುಕ್ಮಿಣಿ ಸ್ವಯಂವರ', 'ಬಲಿ ಚಕ್ರವರ್ತಿ' ಹೀಗೆ ಅನೇಕ ಪ್ರಸಂಗಗಳನ್ನು ನೀಡುತ್ತಾ ಬಂದರು.

ತಂದೆಯ ಜೊತೆ ಬೆಂಗಳೂರು, ಮದ್ರಾಸ್, ತಿಪಟೂರು, ಮುಂಬಯಿ, ಮದ್ರಾಸ್, ಕೊಯಮತ್ತೂರುಗಳಲ್ಲೂ ಹಲವಾರು ಬಾರಿ ಹರಿಕಥೆಗಳನ್ನು ಮಾಡಿ ಸಾಕಷ್ಟು ಗೌರವ ಸನ್ಮಾನಗಳನ್ನೂ ಪಡೆದರು. ತಿಪಟೂರಿನಲ್ಲಿ ಹರಿಕಥಾ ವಿದ್ವಾನ್ ಆಗಿದ್ದ ಕವಿ ಭೀಮರಾಜ ನೇತೃತ್ವದಲ್ಲಿ 'ಬಾಲಭಾರತಿ' ಎಂಬ ಬಿರುದನ್ನೂ ಸಂಪಾದಿಸಿಕೊಂಡರು.

ಅವರ ಹದಿನೈದನೇ ವಯಸ್ಸಿನಲ್ಲಿ ಮಾರ್ಪಳ್ಳಿ ಶಿವರಾಮ ರಾವ್ ಅವರೊಂದಿಗೆ ವಿವಾಹವಾಗಿ ದಾಂಪತ್ಯ ಜೀವನಕ್ಕೆ ಕಾಲಿಟ್ಟ ಬಳಿಕ ಸಾಂಸಾರಿಕ ಜವಾಬ್ದಾರಿಯ ಹೊಣೆ ಹೊತ್ತು ತಮ್ಮ ಹರಿಕೀರ್ತನಾ ಬದುಕಿಗೆ ತಾತ್ಕಾಲಿಕ ವಿದಾಯ ಹೇಳಿದರು. ತಮ್ಮ 9 ರಿಂದ 14ನೇ ವಯಸ್ಸಿನೊಳಗೆ ಯಶಸ್ಸಿನ ಉತ್ತುಂಗಕೇರಿದ ಪದ್ಮಾವತಿ ಬಾಯಿ ಹಲವಾರು ಪೌರ ಸನ್ಮಾನವನ್ನು ಸ್ವೀಕರಿಸಿದ್ದರು. 1936ನೇ ಎಪ್ರಿಲ್ 12 ರಂದು ಪೊಳಲಿ ದೇವಸ್ಥಾನದ ಬಳಿ 'ದ್ರೌಪದಿ ಅಭಿಮಾನ ರಕ್ಷಣೆ' ಎಂಬ ಪ್ರಸಂಗದ ಹರಿಕಥೆಯಿಂದ ಬಂದ ಉತ್ಪತ್ತಿಯನ್ನು ಪೊಳಲಿ ವಿದ್ಯಾ ವಿಲಾಸ ಮತ್ತು ಗುರುಪುರ ಖಾಸಗಿ ರಸ್ತೆಯ ದುರಸ್ತಿ ಕಾರ್ಯಗಳಿಗೆ ನೀಡಿದ್ದು ಅವರ ಸಾಮಾಜಿಕ ಕಳಕಳಿಗೆ ಉದಾಹರಣೆ.

ದಾಂಪತ್ಯ ಬದುಕಿನಲ್ಲಿ ಏಳು ಗಂಡು ಮತ್ತು ನಾಲ್ಕು ಹೆಣ್ಣು ಮಕ್ಕಳ ಪೋಷಣೆಯಲ್ಲಿ ತೊಡಗಿದ್ದ ಅವರು ಆದರ್ಶ ಮಾತೆಯಾಗಿಯೂ ಜನಾನುರಾಗಿಯಾಗಿದ್ದರು. ಧರ್ಮಸ್ಥಳದ ಹಿಂದಿನ ಧರ್ಮಾಧಿಕಾರಿ ಮಂಜಯ್ಯ ಹೆಗ್ಗಡೆಯವರು ಈ ಹಿಂದೆ ಪದ್ಮಾವತಿಯವರ ಅಪೂರ್ವ ಕಲಾ ಪ್ರೌಢಿಮೆಯನ್ನು ಗುರುತಿಸಿ ಚಿನ್ನದ ಗುಲಾಬಿ ಹೂ ನೀಡಿ ಗೌರವಿಸಿದ್ದನ್ನು ದಾಖಲೆ ಪತ್ರಗಳಿಂದ ತಿಳಿದ ಈಗಿನ ಧರ್ಮಾಧಿಕಾರಿ ಡಾ। ವಿರೇಂದ್ರ ಹೆಗ್ಗಡೆಯವರು ನವರಾತ್ರಿ ಸಂದರ್ಭದಲ್ಲಿ 50 ವರ್ಷದ ಬಳಿಕ ಧರ್ಮಸ್ಥಳದಲ್ಲಿ ವಿದುಷಿ ಪದ್ಮಾವತಿಯವರನ್ನು ಆಹ್ವಾನಿಸಿ 'ಸೀತಾ ಕಲ್ಯಾಣ' ಎಂಬ ಹರಿಕಥೆಯನ್ನು ಏರ್ಪಡಿಸಿದ್ದರು. ಚಿನ್ನದ ಉಂಗುರ ನೀಡಿ ಆಶೀರ್ವದಿಸಿದರು. ಅದು ಪದ್ಮಾವತಿಯವರ ಬದುಕಿನಲ್ಲಿ ಮರೆಯಲಾಗದ ಅನುಭವ.

ಡಾ। ಶಿವರಾಮ ಕಾರಂತರು ಪುತ್ತೂರಿನಲ್ಲಿದ್ದಾಗ ಪದ್ಮಾವತಿ ಬಾಯಿಯವರಿಗೆ 'ಶ್ರೀ ರಾಮಕೃಷ್ಣ ಪರಮಹಂಸ' ಎಂಬ ಹರಿಕಥೆಯನ್ನು ಬರೆದು ಕೆಲ ದಿನ ತರಬೇತಿಯನ್ನು ನೀಡಿದ್ದರು. ಕುಂದಾಪುರ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪದ್ಮಾವತಿಯವರ ಸೇವೆಯನ್ನು ಗುರುತಿಸಿ ಡಾ। ಕಾರಂತರೇ ಸನ್ಮಾನಿಸಿದರು. 1985ರಲ್ಲಿ ವಿಶ್ವ ಕನ್ನಡ ಸಮ್ಮೇಳನದಲ್ಲಿ ಮಾಸಿಕ ಗೌರವ ಧನ ನೀಡಿ ಸನ್ಮಾನಿಸಲಾಯಿತು. ಶ್ರೀ ಕ್ಷೇತ್ರ ಸುಬ್ರಹ್ಮಣ್ಯ ಮಠ, ಅಲ್ಲದೆ ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾ, ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಹಾಗೂ ಶ್ರೀ ಕ್ಷೇತ್ರ ಒಡಿಯೂರಿನಲ್ಲಿ ಜರುಗಿದ ರಾಜ್ಯ ಮಟ್ಟದ ಹರಿದಾಸರುಗಳ ಸಮ್ಮೇಳನದಲ್ಲಿ ಅವರನ್ನು ಸನ್ಮಾನಿಸಲಾಗಿದೆ. ಅತ್ಯಲ್ಪ ಕಾಲದಲ್ಲಿ ಪದ್ಮಾವತಿ ಬಾಯಿ ಸಮಾಜದ ಸಂಪ್ರದಾಯಬದ್ಧ ಕಟ್ಟುಪಾಡುಗಳಿಗೆ ಶರಣಾಗಿ ಕಲಾ ಬದುಕಿನಿಂದ ವಿಶ್ರಾಂತಿ ಪಡೆದರು.

ಹರಿಕೀರ್ತನೆ ಕ್ಷೇತ್ರದಲ್ಲಿ ಬಾಲ್ಯದಿಂದಲೇ ಅಪಾರ ಸಾಧನೆ ಮಾಡಿದ ಪದ್ಮಾವತಿ ಶಿವರಾಮರಾವ್ ಅವರು ತಮ್ಮ ಸುಮಧುರ ಕಂಠದಿಂದ ಹೊರ ಹೊಮ್ಮಿದ ಹರಿಕಥಾಮೃತಸಾರದ ಗುಂಗನ್ನು ಮಾತ್ರ ಉಳಿಸಿ ಹೋಗಿದ್ದಾರೆ. ಅವರ ಆದರ್ಶ, ಹರಿಕಥೆಯಲ್ಲಿನ ಅವರ ಸಾಧನೆ ಸದಾ ಜೀವಂತ.

# ದಾಂಪತ್ಯ ಜೀವನದ ಚಿನ್ನದ ಹಬ್ಬದ ಸಂಭ್ರಮ



ಶ್ರೀ ಎಚ್. ಹಿರಿಯಣ್ಣರವರು ತಾ.25-5-08ಕ್ಕೆ ತಮ್ಮ ಪತ್ನಿ ಲೀಲಾವತಿಯವರೊಂದಿಗಿನ 50 ವರ್ಷಗಳ ತಮ್ಮ ಮಧುರ ದಾಂಪತ್ಯವನ್ನು ಪೂರ್ಣಗೊಳಿಸಲಿದ್ದು ಅವರ ಮಕ್ಕಳು, ಮೊಮ್ಮಕ್ಕಳು ಹಾಗೂ ಬಂಧುಗಳು ಅವರ ವೈವಾಹಿಕ ಚಿನ್ನದ ಹಬ್ಬವನ್ನು ಸಂಭ್ರಮದಿಂದ ಆಚರಿಸಲು ಏರ್ಪಾಡು ನಡೆಸಿದ್ದಾರೆ. ಈ ಸುದ್ದಿಯನ್ನೇ ಆಮಂತ್ರಣವಾಗಿ ಸ್ವೀಕರಿಸಿ ಆಗಮಿಸಬೇಕೆಂದು ಕೇಳಿಕೊಂಡಿದ್ದಾರೆ.

38 ವರ್ಷಗಳ ಕಾಲ ಹಲವು ಶಾಲೆಗಳಲ್ಲಿ ಆದರ್ಶ ಶಿಕ್ಷಕರಾಗಿ ಸೇವೆಸಲ್ಲಿಸುತ್ತಾ ನಿವೃತ್ತಿ ನಂತರವು ಸಹ ಸಮಾಜ-ಬಯಕೆಯಿಂದ ಹಲವಾರು ಅಡೆತಡೆಗಳನ್ನು ಲೆಕ್ಕಿಸದೆ ಸತತ ಹೋರಾಟದಿಂದ ಇವರ ನೇತೃತ್ವದಲ್ಲಿ ಶಾಲೆ ಹಾಗೂ ಅಂಗನವಾಡಿ ಕೇಂದ್ರ ಪ್ರಾರಂಭಿಸಲ್ಪಟ್ಟಿತು. ನಮ್ಮ ಸಮಾಜದ ಏಳಿಗೆಗಾಗಿ ಹಾಗೂ ನಮ್ಮ ತಾಲೂಕಿನ ಸ್ಥಾನಿಕ ಬ್ರಾಹ್ಮಣರಿಗೆ ಉಪಯುಕ್ತವಾಗಬಹುದೆನ್ನುವ ನಿರೀಕ್ಷೆಯಿಂದ ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘವನ್ನು ಸ್ಥಾಪಿಸಲು ಶ್ರಮಿಸುವುದರೊಂದಿಗೆ, ಸಂಘದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ತಿಳಿಸಲು ಸಂತೋಷವಾಗುತ್ತದೆ. ಸುಬ್ರಹ್ಮಣ್ಯ ಸಭಾ ಮಂಗಳೂರು ಇದರ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿ ಸೇವೆಸಲ್ಲಿಸಿರುತ್ತಾರೆ. ಕುಂದಾಪುರ ತಾಲೂಕು ದ್ರಾವಿಡ ಬ್ರಾಹ್ಮಣ ಸಂಘ ಉಪ್ಪುಂದ ವಲಯದ ಅಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸುವುದರೊಂದಿಗೆ ಇವರ ಸೇವಾ ಅವಧಿಯಲ್ಲಿ ಸಂಘವನ್ನು ಆರ್ಥಿಕವಾಗಿ ಸದೃಢಗೊಳಿಸಿರುವುದನ್ನು ಸ್ಮರಿಸಬಹುದಾಗಿದೆ. ಉಪ್ಪುಂದ ಹಾಲು ಉತ್ಪಾದಕರ ಸಹಕಾರಿ ಸಂಘದ ನಿರ್ದೇಶಕರಾಗಿ ಸೇವೆ ಸಲ್ಲಿಸಿರುತ್ತಾರೆ. ಹೊಸ್ಕೋಟೆಯಲ್ಲಿ ಹೈನುಗಾರರು, ಹಾಲಿನ ಮಾರುಕಟ್ಟೆಯ ಸಮಸ್ಯೆಯನ್ನು ಅನುಭವಿಸುತ್ತಿರುವ ಹಿನ್ನೆಲೆಯಲ್ಲಿ ಹೊಸ್ಕೋಟೆ ಹಾಲು ಉತ್ಪಾದಕರ ಸಂಘ ಸ್ಥಾಪಿಸಲು ಶ್ರಮಿಸಿ ಸತತ ನಾಲ್ಕನೇ ಬಾರಿ ಅವಿರೋಧವಾಗಿ ಅಧ್ಯಕ್ಷಸ್ಥಾನವನ್ನು ಅಲಂಕರಿಸಿರುವುದು ಹೆಮ್ಮೆಯ ಸಂಗತಿ.

# ಕೋಟೆಕಾರು ಶೃಂಗೇರಿ ಮಠದಲ್ಲಿ ಶ್ರೀ ಶಂಕರ ಜಯಂತಿ ಆಚರಣೆ

ಮಂಗಳೂರು ಕೋಟೆಕಾರು ಶೃಂಗೇರಿ ಶಂಕರ ಮಠದಲ್ಲಿ ತಾ.08-05-2008ರಿಂದ 10-05-2008ರ ವರೆಗೆ ಶ್ರೀ ಶಂಕರ ಜಯಂತಿ ಉತ್ಸವವು ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನೆರವೇರಿತು.

ತಾ.8ರಂದು ಡಾ। ಜಿ.ಎಸ್ ಭಟ್‌ರಿಂದ, 9ರಂದು ಡಾ। ಮೇಘಶ್ಯಾಮರಾವ್‌ರಿಂದ ಉಪನ್ಯಾಸ ತಾ.10ರಂದು ಶ್ರೀ ಮಿಜಾರು ಸದಾನಂದ ಪೈಯವರಿಂದ ಧಾರ್ಮಿಕ ಉಪನ್ಯಾಸ ಕಾರ್ಯಕ್ರಮಗಳು ವಿಜೃಂಭಣೆಯಿಂದ ನಡೆಯಿತು.

## ಯಕ್ಷಗಾನವು ಜಾನಪದವೋ, ಜನಪದೀಯವೋ

(...2ನೇ ಪುಟದಿಂದ)

ಒಪ್ಪಿಸುವುದು ಸಂಪ್ರದಾಯ. ಸಾಮಾನ್ಯವಾಗಿ, ಮಾಸ್ಟರ್ ಹಿರಣ್ಣಯ್ಯನವರಂತಹ ಪ್ರತಿಭಾವಂತರನ್ನು ಬಿಟ್ಟರೆ ರಂಗಭೂಮಿಯಲ್ಲಿ 'ಸ್ವಯಂ' ಮಾತುಗಾರಿಕೆಯವರು ಇಲ್ಲವೆಂದೇ ಹೇಳಬಹುದು. ಆದರೆ ಯಕ್ಷಗಾನದಲ್ಲಿ ಕಂಠಪಾಠವಿರಲಿ, ಇನ್ನೊಬ್ಬರು ಮಾಡಿದ ಪಾತ್ರಗಳನ್ನು ತಾವು ಮಾಡುವಾಗ ಮಾತುಗಾರಿಕೆ ಮತ್ತು ಸಂಭಾಷಣೆಗಳಲ್ಲಿ ವ್ಯತ್ಯಾಸವನ್ನು ಪ್ರೇಕ್ಷಕರು ಗುರುತಿಸಬಹುದಾಗಿದೆ. ಅದೂ ಸಹ ರಸಭಾವ ಪ್ರಕಟಣೆ, ಶ್ರುತಿಬದ ಸ್ವರ, ಅಲಂಕಾರಿಕವಾದ ಮಾತುಗಳು, ತಾರ್ಕಿಕವಾದ ವಿಚಾರಸರಣಿ, ಪ್ರಾಸಬದವಾದ ವಾಕ್ಯಗಳು - ಇವುಗಳನ್ನು ನಾವು ಯಕ್ಷಗಾನದಲ್ಲಿ ಗುರುತಿಸಬಹುದು!

'ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' - ಎಂಬುದರ ಸತ್ಯತೆಯನ್ನು ಈಗ ನೋಡೋಣ. ಯಕ್ಷಗಾನ ಕೃತಿಗಳಿಗೆ ಐದು ಆರುನೂರು ವರ್ಷಗಳ ಹಿನ್ನಲೆ ಇದೆ. ಆ ಕಾಲದಲ್ಲಿ ಯಾವುದೇ ವಿಶ್ವವಿದ್ಯಾನಿಲಯದಿಂದ ಪದವಿ ಪಡೆಯದ, ಡಾಕ್ಟರೇಟ್, ಡಿ. ಲಿಟ್, ಎಂ. ಫಿಲ್ ಇತ್ಯಾದಿಗಳನ್ನು ತೆಗೆದುಕೊಳ್ಳದ ಕೇವಲ ತಮ್ಮ ಮಸಕದ ಪುಸಕದಿಂದ ಆಯ್ದ ವಿಚಾರಗಳನ್ನು ಯಕ್ಷಗಾನ ಪ್ರಸಂಗಳಲ್ಲೆ ರಾಗ, ಲಯ, ತಾಳಗಳಿಗೆ ಬದವಾಗಿ ವಿವಿಧ ಷಟ್ಪದಿಗಳ ಛಂದಸ್ಸಿನಲ್ಲಿ ಅಲಂಕಾರಿಕವಾದ ಪದಪುಂಜಗಳಲ್ಲಿ ಬಟ್ಟಿಯಿಳಿಸಿದ ಹಲವು ಮಂದಿ ಪ್ರತಿಭಾವಂತ ಯಕ್ಷಗಾನ ಕವಿಗಳನ್ನು ನಾವು ಕಾಣಬಹುದು! ನಂದಳಿಕೆ ಲಕ್ಷ್ಮೀನಾರಾಯಣ (ಮುದಣ), ಪಾರ್ತಿಸುಬ್ಬ, ಹಟ್ಟಿಯಂಗಡಿ ರಾಮಭಟ್ಟ, ಧ್ವಜಪುರ (ಕೋಟೇಶ್ವರ)ದ ನಾಗಪ್ಪಯ್ಯ, ಹಲಸಿನ ಹಳ್ಳಿ ನರಸಿಂಹ ಶಾಸ್ತ್ರಿ ಮುಂತಾದ ಅನೇಕ ಮಂದಿಗಳನ್ನು ಇಲ್ಲಿ ನಾವು ಸ್ಮರಿಸಿಕೊಳ್ಳಬಹುದು. ಉಭಯಾರ್ಥ, ನಾನಾರ್ಥ, ಶ್ಲೇಷೆ, ವ್ಯಂಗ್ಯಾರ್ಥ, ಪ್ರಾಸ - ಇತ್ಯಾದಿಗಳಿಂದ ಕೂಡಿದ ಪಾಂಡಿತ್ಯದಿಂದ ಕೂಡಿದ ಹಲವಾರು ಯಕ್ಷಗಾನ ಕೃತಿಗಳು ಈ ಕವಿಗಳ ಅಮೂಲ್ಯ ಲೇಖನಿಗಳಿಂದ ಹೊರಹೊಮ್ಮಿವೆ! ನಮ್ಮ ಸಾಹಿತ್ಯ ಸಮ್ಮೇಳನಗಳಲ್ಲಿ ಸಾಹಿತ್ಯ ಸಂವಾದಗಳಲ್ಲಿ, ಸಾಹಿತ್ಯ ಕೃತಿಗಳಲ್ಲಿ, ಕವಿ ಸಮ್ಮೇಳನಗಳಲ್ಲಿ ಇಂತಹ ಪ್ರತಿಭಾವಂತ ಯಕ್ಷಗಾನ ಕವಿಗಳಿಗೆ ಇನ್ನೂ ಸ್ಥಾನ ದೊರಕಿಲ್ಲದಿರುವುದು ದುರಂತವೇ ಸರಿ. ಮುಂಬಯಿ ಮಹಾನಗರದ ಪದವೀಧರ ಯಕ್ಷಗಾನ ಸಮಿತಿ'ಯೊಂದು ಮಾತ್ರ ಎರಡು ವರ್ಷಗಳಿಗೊಮ್ಮೆ ಯಕ್ಷಗಾನ ಸಾಹಿತ್ಯ ಸಮ್ಮೇಳನ'ವನ್ನು ಆಯೋಜಿಸುತ್ತಿದೆ. ಮರಾಠಿ ನಾಡಿನಲ್ಲಿ ಹರಡುತ್ತಿರುವ ಈ 'ಕನ್ನಡ ಕಂಪು' ನಿಜಕ್ಕೂ ಶ್ಲಾಘನೀಯವೇ ಸರಿ!

ಕೊನೆಯದಾಗಿ, ಯಕ್ಷಗಾನವು ಗ್ರಾಮಿಣ ಪ್ರದೇಶದ 'ಜಾಗರಣೆಯ ಸೊತ್ತಲ್ಲ; ಕಸುಬಲ್ಲದವರ ಕಾಲಹರಣದ ಕ್ರೀಡೆಯಲ್ಲ; ಅರ್ಥಂಬರ್ಥ ಯಕ್ಷಗಾನದ ಗಂಧಗಳಿರುವ ಅರೆ ಕಲಾವಿದರ ಜೀವನೋಪಾಯದ ಮಾರ್ಗವಲ್ಲ - ಬದಲಾಗಿ ಸರ್ವರೂ ಮೆಚ್ಚಿ ಪೂಜಿಸಬೇಕಾದ, ಪೌರಾಣಿಕ ಕಥೆಗಳಿಂದ ಜೀವನ ಮೌಲ್ಯಗಳನ್ನು ಸಾರುತ್ತಿರುವ ಉಪದೇಶಾಮೃತ ಸಾರವೆಂದು ತಿಳಿದಿರಬೇಕಾದ 'ಪರಿಪೂರ್ಣ ಕಲೆ'ಯೆಂದು ಪ್ರತಿಯೊಬ್ಬ ಕನ್ನಡಿಗನೂ ತಿಳಿಯಬೇಕಾದುದು ಅನಿವಾರ್ಯ.

ಏನನುಸಿರಲಿ ಮಾನಿನಿಯ ಚೆಲುವಾನನದ ಪರಿಗೆ । ಮದಗಜ । ಯಾನೆ ಕೋಕಿಲಗಾನೆ ಸತಿಯಾನೂನ ಮೊಗಸಿರಿಗೆ । ಮತುಡು । ಸೇನೆಯಧಿಪತಿ ಬಾನತ್ಯಜಿಸುತಲೀ ನಿತಂಬಿಗೆ । ನಿಟಿಲದಿ । ಸಾನುರಾಗದೊಳ್ ತಾನೆ ಮೆರೆಯುತ ಪೂರ್ಣ ಕಳೆಯೆಸೆಗೆ । ಇದಕನು । ಮಾನವಿಲ್ಲವಿ ದೇನೆನಲು ಹಗೆ ಮಾನವಗೆ ತಾವ್ ಬನೆ ಪಡುವಂ । ತೀನಳಿನಗಳು ನ್ಯೂನಗೊಂಡಿವೆ । ಹೀಗಿಸುತಲಾ ಏಣಧರನನು ॥

ನಂದಳಿಕೆ ಲಕ್ಷ್ಮಿನಾರಾಯಣ (ಮುದ್ದಣ) - ರತ್ನಾವತೀ ಕಲ್ಯಾಣ,-ಏನೊಂದು ಸಾದೃಶ್ಯ ರೂಪಕವಿದರಲ್ಲಿದೆ ಗಮನಿಸಿ.

॥ ಜಯ ಯಕ್ಷಮಾತಾ ॥

★★★


Krishna Rao

Ph :2552560
Mob. :92422 02118



KISHAN



Studio & Video

Indoor Photography & Port Folio Photography,
Video & Mixing, Lamination

MAIN ROAD, MAJOOR & BANTAKAL.

ರಾಮಾ ಅಟೋಮೊಬೈಲ್ಸ್

ಮಾರುತಿ ವಾಹನ ತಜ್ಞರು

ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.

ಫೋನ್ : 2454355, ಮೊಬೈಲ್ : 94485 45702



ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ

